


**ಆತ:** ನನಗೆ ಈ ಸರ್ಕಾರ ಬಂದಿದ್ದು ತುಂಬ ಖುಷಿಯಾಗಿದೆ ಕಣೊ.
**ಈತ:** ಯಾಕೆ? ಮೊದಲು ಹಿಂದಿನ ಸರ್ಕಾರವನ್ನೂ ಹೊಗಳುತ್ತಿದ್ದೆ.
**ಆತ:** ಹೌದು, ಇವರು ಫ್ರೀ ಬಸ್ಸು ಮಾಡಿದ್ದಕ್ಕೆ ನನಗೆ ಈಗ ಮನೆಯೇ ಸ್ವರ್ಗವಾಗಿದೆ.

**ಗುಂಡ:** ಇವರು ಫ್ರೀ ಬಸ್ ಮಾಡಿ ಹೆಣ್ಣು ಮಕ್ಕಳ ಸಬಲೀಕರಣಕ್ಕಿಂತ ಗಂಡು ಮಕ್ಕಳಿಗೆ ನೆರವಾಗಿದ್ದಾರೆ.
**ಭಂಡ:** ಅದ್ಹೇಗೆ?
**ಗುಂಡ:** ಗಂಡಸರಿಗೆ ಮನೆಯಲ್ಲಿ ಇಷ್ಟು ವರ್ಷ ಇಲ್ಲದ ಸ್ವಾತಂತ್ರ್ಯ ಈಗೀಗ ಸಿಗುತ್ತಿದೆ.

**ಗಂಡ:** ನೀನು ಗಂಡನನ್ನು ಹೀಗೆ ಸತಾಯಿಸಿದ್ರೆ ನರಕಕ್ಕೆ ಹೋಗ್ತೀಯಾ?
**ಹೆಂಡತಿ:** ನೀ ಅಲ್ಲಿಗೆ ಹೋದ್ರೆ ಬಿಡ್ತೀನಿ ಅಂದುಕೊಂಡಿದ್ದೀಯಾ? ಅಲ್ಲಿಗೂ ಬರ್ತೀನಿ.

**ಶಿಕ್ಷಕ:** ಬರ ಬಂದರೂ ನಮಗೆ ಲಾಭ ಆಗ್ಲಿಲ್ಲ ಮಾರಾಯಾ.
**ಗೆಳೆಯ:** ಯಾಕೆ?
**ಶಿಕ್ಷಕ:** ನಮ್ಗೆ ರಜ ಸಿಗಲಿಲ್ವಲ್ಲ.

**ಪ್ರಿಯತಮ:** ನಿನಗೆ ಏನು ಬೇಕು?
**ಪ್ರಿಯತಮೆ:** ನನಗೊಂದು ಕಾಫಿ ಹೇಳಿ, ನಿನಗೆ ಆ್ಯಂಬುಲೆನ್ಸ್ ಬುಕ್ ಮಾಡು. ನಾವಿಬ್ಬರು ಜೊತೆಗಿರುವುದನ್ನು ನಿನ್ನ ಹೆಂಡತಿ ಇಲ್ಲೇ ಪಕ್ಕದ ಟೇಬಲ್‌ನಲ್ಲಿ ಟೀ ಕುಡಿಯುತ್ತಾ ನೋಡುತ್ತಿದ್ದಾಳೆ.

**ಗುಂಡ:** ಕೊರೊನಾ ಇದ್ದ ಕಾಲವೇ ಚೆನ್ನಾಗಿತ್ತು. ಯಾಕೆಂದರೆ ಆಗ ಮೇಷ್ಟ್ರ ಕಾಟ ಇರ್ಲಿಲ್ಲ.
**ಮಂಡ:** ಹೌದು ಕೊರೊನಾಗೆ ನಾವು ಥ್ಯಾಂಕ್ಸ್ ಹೇಳಬೇಕು. ಹಾಗೇ ಅದು ಮತ್ತೊಮ್ಮೆ ಯಾಕೆ ಬರಬಾರದು ಅಂತಾನೂ ಅನಿಸ್ತಿದೆ.

**ಮಾಜಿ ಶಾಸಕ:** ನನಗೆ ಬರ ಬಂದಿದ್ದು ಮನಸ್ಸಿಗೆ ನೆಮ್ಮದಿ ಕೊಟ್ಟಿದೆ.
**ಪಕ್ಷದ ಕಾರ್ಯಕರ್ತ:** ಅದು ಹೇಗೆ?
**ಆಕೆ:** ಬರ ಹಿನ್ನೆಲೆ ಹಾಲಿ ಶಾಸಕನ ಫಾರಿನ್ ಟೂರ್ ಕ್ಯಾನ್ಸಲ್ ಆಯ್ತು ಅದ್ಕೆ.

**ನವ ವಿವಾಹಿತೆ:** ರೀ... ಮದುವೆ ಆದ ಮೇಲೆ ಹನಿಮೂನ್‌ಗೆ ಪ್ಯಾರಿಸ್‌ಗೆ ಹೋಗೋಣ ಅಂದಿದ್ರಿ.
**ನವ ವಿವಾಹಿತ:** ಹೋಗಬಹುದಿತ್ತು ಕಣೇ, ಆದರೆ ಬರ ವಕ್ಕರಿಸಿದೆ ಅಲ್ವಾ, ಸೋ ಕ್ಯಾನ್ಸಲ್

ಸಂಗ್ರಹ: ಪ್ರಕಾಶ್ ಮನ್ನಂಗಿ, ಮೂಟೆಬೆನ್ನೂರು




**ಪತ್ನಿ:** ಯಾವ ಹಬ್ಬಕ್ಕೆ ತವರಿಗೆ ಹೋದಾಗ ತೊಂದರೆಯಾಗುತ್ತೆ?
**ಪತಿ:** ಹಬ್ಬಕ್ಕೆ ಹೋದಾಗ ತೊಂದರೆ ಆಗಲ್ಲ. ವಾಪಸ್ ಬರ್ತೀನಿ ಅಂದಾಗ ತೊಂದರೆಯಾಗುತ್ತೆ.

**ಪತ್ನಿ:** ನನ್ನನ್ನು ಪ್ರೀತಿಸ್ತೀರಾ?
**ಪತಿ:** ಹೌದು ಹೌದು.
**ಪತ್ನಿ:** ಎಷ್ಟೊಂದು ಪ್ರೀತಿಸ್ತೀರಿ ಅಂತ ಸ್ವಲ್ಪ ವಿವರಿಸಿ.
**ಪತಿ:** ನಿನ್ನ ಬಿಟ್ಟು ಇರಲಾರದಷ್ಟು.
**ಪತ್ನಿ:** ಅಕಸ್ಮಾತ್ ನಾನು ಸತ್ತರೆ.
**ಪತಿ:** ನನಗೆ ಹುಚ್ಚೇ ಹಿಡಿಯುತ್ತೆ.
**ಪತ್ನಿ:** ಹಾಗೆಲ್ಲ ಅನ್ನಬೇಡಿ. ಮತ್ತೊಂದು ಮದುವೆ ಆಗ್ರಿ.
**ಪತಿ:** ಹುಚ್ಚು ಹಿಡಿದ ಮೇಲೆ ನನಗೆ ಹೆಣ್ಣು ಯಾರು ಕೊಡ್ತಾರೆ?

**ವಿಶ್ವ:** ಯಾಕೋ ಗೆಳೆಯಾ ಬೇಜಾರಲ್ಲಿದ್ದೀಯಾ?
**ಗುರು:** ಗಣಿತ ವಿಷಯದಲ್ಲಿ ಫೇಲಾದೆ.
**ವಿಶ್ವ:** ಅದಕ್ಕೆ.
**ಗುರು:** ಆತ್ಮಹತ್ಯೆ ಮಾಡಿಕೊಳ್ಳೋಣ ಅಂತ ಹೊರಟಿದ್ದೆ.
**ವಿಶ್ವ:** ಬೇಡ, ಬೇಡ ಎಷ್ಟೇ ಕಷ್ಟ ಆದ್ರೂ ಮತ್ತೆ ಬರಿ.
**ಗುರು:** ಇಲ್ಲಾ ನಾ ಬರೆಯೋದಿಲ್ಲ, ಸತ್ತು ಹೋಗ್ತೀನಿ.
**ವಿಶ್ವ:** ನೋಡು ಸತ್ತು ಮತ್ತೆ ಹುಟ್ಟಿ ಬಂದ್ರೆ ಆರೂ ಪೇಪರ್ ಬರೀಬೇಕಾಗುತ್ತೆ. ಈಗಾದ್ರೆ ಒಂದೇ ಪೇಪರ್ ಅಷ್ಟೇ.

ಸಂಗ್ರಹ: ಸಿ.ಕೆ. ಗಣಪ್ಪನವರ, ಮುಂಡರಗಿ